
ಗುಡಿ ಗುಡಿಗಳ ಗುಡಿ ಪಟ ಹಾರಿದರೆ ಬೇರೆ ಬೇರೆ
ನಮ್ಮ ಭಗಿನಿತ್ವ ಬಂಧುತ್ವ ಸೋದರತ್ವಗಳನ್ನು
ಕಾಲಡಿಯ ಕಸ ಮಾಡಿದೀ ನಿರ್ಬುದ್ಧ ನೀಚರೂ
ನಮ್ಮವರೇ ನಮ್ಮೊಳಗಿನವರೇ...

ಸದ್ಬುದ್ಧಿ ಸದ್ಭಾವ ಸಿಗಬೇಕು ಸಕಲರಿಗೆ
ಬೇಕು ಕೊಡಬೇಕು ಇನ್ನಷ್ಟು ಸಿಗುವಂತಾಗಬೇಕು
ಒಡೆಯುವುದು ನಿಲ್ಲಿಸಿರಿ ಸಾಕು
ಒಂದಾಗಿ ಒಟ್ಟಾಗಿ ಬಾಳೋಣ
ಹಾಳು ಬೀಳು ಹೋಳು ಆಗದಿರೋಣ,
ಕೂಡಿ ನಲಿವ ಬಂಧದಲಿ ಕಲೆಯೋಣ,
ನಮ್ಮ ಎದೆಗೂಡು ಹೃದಯಗಳೆ ಪೂಜೆ ಕೇಂದ್ರಗಳು
ನಮ್ಮ ಸಜ್ಜನಿಕೆ ಗರ್ಭಗುಡಿ ಅಲ್ಲಿ
ಮನುಷ್ಯತ್ವವೇ ಆರಾಧ್ಯ ದೇವಪ್ರತಿಮೆ
ಹಾಗೆ ನಾವೂ ಅವರೂ ಕೂಡಿ ಶ್ರಮಿಸೋಣ

ಅವರು ಶ್ರಮಿಸದಿದ್ದರೆ ಬಿಡಲಿ,
ನಮ್ಮನ್ನು ಗೌರವಿಸದಿದ್ದರೆ ಬಿಡಲಿ,
ಸುಮ್ಮನಿದ್ದಿರಲಿ,
ಅವಗಣಿಸದಿರಲಿ, ಅವಮಾನಿಸದಿರಲಿ

ಕಟ್ಟೋಣ ಹೊಸ ಮನಸುಗಳನ್ನು
ಕಟ್ಟುವುದು ಸಾಕು ಕಲ್ಲು ಗಾರೆ ಕಟ್ಟಡ ಇನ್ನು
ಅದು ವಿವೇಕ ಸತ್ಯ ಶ್ರೇಯಸ್ಸು
ಅದು ನಮಗೆ ಭಾರತಕೆ ಸಂಸ್ಕೃತಿಗೆ
ಗೆಲುವು ಯಶಸ್ಸು.





# ಮೂರ್ತಿ

ಯುಗಯುಗಗಳಿಂದ ಹಂಬಲಿಸಿದ್ದ
ಕೆತ್ತಿದ್ದ ಮಾಡಿದ್ದ ನಿರ್ಮಿಸಿದ್ದ
ರಮಣೀಯ ಮೋಹಕ ಮೂರ್ತಿ,
ಜೀವ ಸೆಲೆ ಒಸರಿತು
ತುಂಬಿದ ಪ್ರಾಣ ಪ್ರತಿಷ್ಠಾಪಿಸಿದ
ಮನೋಮಂದಿರದಿ
ನಸುನಗುತ ಅಪ್ಪಿದಳು ಆವರಿಸಿದಳು
ಕವಿಯೊಳಗೆ ಅವಿತಳು
ಮೈದುಂಬಿದಳು ಕವಿತೆ ಮೈಮರೆವಂತೆ
ಹೊರಹೊಮ್ಮತೊಡಗಿದುವು
ಸುಮ್ಮಾನ ದುಮ್ಮಾನ ದಿನಮಾನ ಕಳೆದಂತೆ
ಒಂದೊಂದೆ ಒಂದೊಂದೆ
ಹೂ ಬಿರಿದು ವಾಸನೆ ಚಿಗುರೊಡೆದುವು
ಇಂದು ಅನುಭವ ತಟ್ಟಿತು
ಗುಣಿಸತೊಡಗಿದ ಎಲ್ಲೊ ಕೊರತೆ ಕಾಣುತ್ತಿದೆ
ಹೌದು, ಮರೆತಿದ್ದಾನೆ
ಮೋಹ ಮದ ಸೆಳೆತಕ್ಕೆ ಸಿಲುಕಿದ್ದಾನೆ
ಔದಾರ್ಯ ಸಹನೆ ಕರುಣೆ
ತುಂಬಲೆ ಇಲ್ಲ ಗಡಿಬಿಡಿ ಗೊಂದಲದಲ್ಲಿ
ಅವನನ್ನು ಅವು ಈಗ
ಈಡುಗಾಯಿ ಪಾಡುಗಾಯಿ ಮಾಡಿವೆ.
ಕವಿಗೆ ಸಾವಿರದ ಚಿಂತೆ
ಕಾಂತಾರದಿ ಕಾಡು
ಸಂಸ್ಥಾಪಿತೆ ಕಾಂತೆ.